ವಿಜಯ ಕರ್ನಾಟಕ

# ಜೈನ್ ತಂಡಕ್ಕೆ ಬಾಸ್ಕೆಟ್‌ಬಾಲ್ ಪ್ರಶಸ್ತಿ



**ವಿಕ ಸುದ್ದಿಲೋಕ** ಬೆಂಗಳೂರು

ಕೊಯಮತ್ತೂರಿನಲ್ಲಿ ನಡೆದ ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಬಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಗೆದ್ದುಕೊಂಡಿದೆ.

ಜಯಲಕ್ಷ್ಮೀ ಸ್ಪೋರ್ಟ್ಸ್ ಅಕಾಡೆಮಿ ಆತಿಥ್ಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಜೈನ್ ತಂಡ ಚೆನ್ನೈನ ವೈಷ್ಣವ್ ಕಾಲೇಜು ವಿರುದ್ಧ 68–57 ಅಂತರದಲ್ಲಿ ಗೆದ್ದು ಪ್ರಶಸ್ತಿ ತನ್ನದಾಗಿಸಿಕೊಂಡಿತು. ತಂಡದ ಜಯದಲ್ಲಿ ರೋಶಿನಿ ಹಾಗೂ ಸಿಮೊನೆಲ್ಲೆ ಪ್ರಮುಖ ಪಾತ್ರವಹಿಸಿದರು. ವಿಜೇತ ತಂಡ ಪ್ರಶಸ್ತಿ ಫಲಕದೊಂದಿಗೆ 25000 ರೂ. ನಗದು ಬಹುಮಾನ ಪಡೆಯಿತು. ತಂಡದ ರೊಶಿನಿ ಉತ್ತಮ ಪೋಸ್ಟ್ ಪ್ಲೇಯರ್ ಪ್ರಶಸ್ತಿ ಗಳಿಸಿದರೆ, ಸಂಧ್ಯಾ ಶ್ರೇಷ್ಠ ಉದಯೋನ್ಮುಖ ಆಟಗಾರ್ತಿ ಗೌರವ ಗಳಿಸಿದರು.

ವಿಜೇತ ತಂಡಕ್ಕೆ ಜೈನ್ ಕಾಲೇಜಿನ ಕ್ರೀಡಾ ವಿಭಾಗದ ನಿರ್ದೇಶಕ ಡಾ. ಯು.ವಿ. ಶಂಕರ್ ಅಭಿನಂದನೆ ಸಲ್ಲಿಸಿದ್ದಾರೆ.